# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಮೈಲವ್ವ, ಅಧ್ಯಕ್ಷರು, ಸೊನ್ನ ಗ್ರಾಮ ಪಂಚಾಯಿತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಳ್ಳಾರಿ ಜಿಲ್ಲೆ, ರವರ ಪತ್ರ ಸಂಖ್ಯೆ: ಜಿಪಂಬ:ಸಿಬ್ಬಂದಿ(3)/ಗ್ರಾ.ಪಂ/139/2016-17/1174 ದಿನಾಂಕ:09.06.2017.
2. ಸರ್ಕಾರದ ಪತ್ರ ಸಂಖ್ಯೆ: ಸಂ.ಗ್ರಾಅಪ:750:ಗ್ರಾಪಂಅ:2017, ದಿನಾಂಕ:30.06.2017 ರ ಕಾರಣ ಕೇಳುವ ನೋಟಿಸ್ಸು.
3. ಶ್ರೀಮತಿ ಮೈಲವ್ವ, ಅಧ್ಯಕ್ಷರು, ಸೊನ್ನ ಗ್ರಾಮ ಪಂಚಾಯಿತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 15.07.2017.
4. ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ದಿನಾಂಕ:25.07.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಪ್ರಸ್ತಾವನೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಸೊನ್ನ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರು ಮತ್ತು ಸದಸ್ಯರು ದಿನಾಂಕ:02.11.2016 ರಂದು ದೂರನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ, ದೂರಿನ ಕುರಿತಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹಗರಿಬೊಮ್ಮನಹಳ್ಳಿರವರು ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 52(1) ರ ಅನ್ವಯ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯನ್ನು ಕನಿಷ್ಠ ಪಕ್ಷ ಒಂದು ತಿಂಗಳಿಗೆ ಒಮ್ಮೆ ಕರೆಯಬೇಕಾಗಿರುತ್ತದೆ. ಆದರೆ ಕ್ಷೇತ್ರ ಶಿಕ್ಷಣಾಧಿಕಾರಿ, ಹಗರಿಬೊಮ್ಮನಹಳ್ಳಿ, ಅವರು ಸಲ್ಲಿಸಿದ ವರದಿ ಹಾಗೂ ಸೊನ್ನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅವರು ದಿನಾಂಕ:16.05.2017 ರಂದು ಸಲ್ಲಿಸಿರುವ ದಾಖಲೆಗಳ ಪ್ರಕಾರ 2015-16 ನೇ ಸಾಲಿಗೆ ಒಟ್ಟು 10 ಸಾಮಾನ್ಯ ಸಭೆಗಳನ್ನು ನಡೆಸಬೇಕಾಗಿತ್ತು (ಜೂನ್ 2015 ರಿಂದ ಮಾರ್ಚ್ 2016 ರವರೆಗೆ) ಆದರೆ ಕೇವಲ 07 ಸಾಮಾನ್ಯ ಸಭೆಗಳನ್ನು ಕರೆಯಲಾಗಿದ್ದು 03 ಸಾಮಾನ್ಯ ಸಭೆಗಳನ್ನು ಅಧ್ಯಕ್ಷರು ಕರೆದಿರುವುದಿಲ್ಲ.

ಅದೇ ರೀತಿ 2016-17 ನೇ ಸಾಲಿನಲ್ಲಿ (ಏಪ್ರಿಲ್ 2016 ರಿಂದ ಮಾರ್ಚ್ 2017 ರವರೆಗೆ) ಪ್ರತಿ ತಿಂಗಳಿಗೆ ಒಂದರಂತೆ ಒಟ್ಟು 12 ಸಾಮಾನ್ಯ ಸಭೆಗಳು ನಡೆಯಬೇಕಾಗಿರುತ್ತದೆ. ಆದರೆ 03 ಸಾಮಾನ್ಯ ಸಭೆಗಳನ್ನು ಕರೆದಿದ್ದು, ಇನ್ನೂ 09 ಸಾಮಾನ್ಯ ಸಭೆಗಳನ್ನು ಅಧ್ಯಕ್ಷರು ಕರೆದಿರುವುದಿಲ್ಲ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳ ಸಾಮಾನ್ಯ ಸಭೆಗಳನ್ನು ಪ್ರತ್ಯೇಕವಾಗಿ ಆಯಾ ತಿಂಗಳಲ್ಲಿ ಟಿಪ್ಪಣಿಯನ್ನು ಮಂಡಿಸದೇ ದಿನಾಂಕ:09.11.2016 ರಂದು ಒಂದೇ ಟಿಪ್ಪಣಿಯಲ್ಲಿ ಅಧ್ಯಕ್ಷರಿಗೆ ಮಂಡಿಸಿದ ದಾಖಲೆಗಳಿವೆ ಎಂದು ತಿಳಿಸಿರುತ್ತಾರೆ.

ಮೇಲಿನ ವಿವರಗಳ ಅನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ರನ್ವಯ ಸೊನ್ನ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಕೆ. ಮೈಲವ್ವ ಅವರ ವಿರುದ್ಧ ಕ್ರಮ ವಹಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 48(4) ರ ಅಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನ್ನು ದಿನಾಂಕ:30.06.2017 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ದಿನಾಂಕ:15.07.2017 ರಂದು ಕಾರಣ ಕೇಳುವ ನೋಟಿಸ್ಸಿಗೆ ಈ ಕೆಳಕಂಡಂತೆ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಸದರಿಯವರು ದಲಿತ ಮಹಿಳೆ ಹಾಗೂ ಅನಕ್ಷರಸ್ಥರೆಂದು, ಅಧ್ಯಕ್ಷೆಯಾಗಿ 27.06.2015 ಕ್ಕೆ ಆಯ್ಕೆಯಾದ ನಂತರ ಈ ದಿನಾಂಕದವರೆಗೆ ಅವರ ಮೇಲೆ ಯಾವುದೇ ಅಧಿಕಾರ ದುರ್ಬಳಕೆ ಮತ್ತು ಹಣ ದುರುಪಯೋಗದಂತಹ ಹಾಗೂ ಇತರೆ ಆರೋಪಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿಯವರು ಅಧ್ಯಕ್ಷೆಯಾದ ನಂತರ ಅವರಿಗೆ ಆಗದವರು ಅಂದರೆ ಅವರ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಅವರನ್ನು ಹೇಗಾದರು ಮಾಡಿ ಅಧ್ಯಕ್ಷೆ ಸ್ಥಾನದಿಂದ ಕೆಳಗಿಳಿಸಬೇಕೆಂಬ ಉದ್ದೇಶದಿಂದ ಮತ್ತು ಅವರ ಮೇಲೆ ಅವಿಶ್ವಾಸ ಮಂಡಳಿ ನಿರ್ಣಯ ಮಾಡುವ ದುರುದ್ದೇಶದಿಂದ ಇಲ್ಲ ಸಲ್ಲದ ಆರೋಪಗಳನ್ನು ಅವರ ಮೇಲೆ ಮಾಡುತ್ತ ಹಾಗೂ ಈ ಹಿಂದೆ ಅವರ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಜ್ಞಾನೇಶ್ವರಯ್ಯ ಇವರು ಉಪಾಧ್ಯಕ್ಷ ಮತ್ತು ಸದಸ್ಯರುಗಳೊಂದಿಗೆ ಕೂಡಿಕೊಂಡು ಹೇಗಾದರೂ ಮಾಡಿ ಪಂಚಾಯಿತಿಯ ಕಾಮಗಾರಿಗಳನ್ನು ಮತ್ತು ಇತರೆ ಸರ್ಕಾರದ ಯೋಜನೆಗಳನ್ನು ದುರುಪಯೋಗ ಮಾಡಿಕೊಳ್ಳುವ ಕೇವಲ ಉದ್ದೇಶದಿಂದ ಅವರನ್ನು ಕಡೆಗಣಿಸುತ್ತ, ಅವಮಾನಿಸುತ್ತ ಮತ್ತು ತಮ್ಮ ವ್ಯಾಪ್ತಿಯಲ್ಲಿಲ್ಲದ ಅಧಿಕಾರಗಳನ್ನು ಪಂಚಾಯಿತಿಯಲ್ಲಿ ಚಲಾಯಿಸಲು ಪ್ರಯತ್ನಿಸಿದ್ದು, ಅವರ ಗಮನಕ್ಕೆ ಬಾರದೆ ಸಾಮಾನ್ಯ ಸಭೆ ನಡೆಸಿ ಪಂಚಾಯತ್ ರಾಜ್ ಕಾಯ್ದೆಯನ್ನು ಉಲ್ಲಂಘಿಸಿದ್ದಾಗಿ, ಈ ಕುರಿತಂತೆ ಅವರು ದಿನಾಂಕ:02.03.2016 ರಂದು ಸದರಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗೆ ನೋಟೀಸ್ ಜಾರಿ ಮಾಡಿದ್ದು, ಅವರ ನೋಟೀಸಿಗೆ ಇಲ್ಲಿಯವರೆಗೂ ಯಾವುದೇ ಉತ್ತರವನ್ನು ಕೊಟ್ಟಿರುವುದಿಲ್ಲವೆಂದು ತಿಳಿಸಿರುತ್ತಾರೆ.

ದಿನಾಂಕ:11.07.2016 ರಂದು ಸದರಿಯವರು ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ರವರಿಗೆ ದೂರು ಸಲ್ಲಿಸಿದ್ದು, ಸದರಿಯವರು ದಲಿತ ಮಹಿಳೆ ಇದ್ದ ಕಾರಣ ಅವರ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡು ಸಾಮಾನ್ಯ ಸಭೆಗಳನ್ನು ಕರೆದು ಅವರನ್ನು ಅಧ್ಯಕ್ಷ ಹುದ್ದೆಯಿಂದ ಹೇಗಾದರು ಮಾಡಿ ಕೆಳಗಿಳಿಸಿ ಅವರನ್ನು ತೇಜೋವಧೆಗೊಳಿಸಲು ಹುನ್ನಾರ ನಡೆಸುತ್ತಿದ್ದಾರೆಂದು ಮತ್ತು ಅವರಿಗೆ ಜಾತಿ ನಿಂದನೆ ಮಾಡುತ್ತಿದ್ದಾರೆಂದು, ಖಾಲಿ ಚೆಕ್‌ಗಳಿಗೆ ಹೆದರಿಸಿ, ಬೆದರಿಸಿ ಸಹಿ ಮಾಡಿಸಿಕೊಳ್ಳುತ್ತಿದ್ದಾರೆಂದು ಹಾಗೂ ಅವರನ್ನು ಪಂಚಾಯಿತಿ ಒಳಗಡೆ ಪ್ರವೇಶ ಮಾಡದಂತೆ ಬಾಗಿಲುಗಳನ್ನು ಹಾಕಿ ತಡೆಹಿಡಿದಿರುತ್ತಾರೆಂದು ತಿಳಿಸಿರುತ್ತಾರೆ. ಅವರ ದೂರಿಗೆ ಮಾನ್ಯ ಸಹಾಯಕ ಆಯುಕ್ತರು, ತಾಲ್ಲೂಕು ಪಂಚಾಯಿತಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸೂಕ್ತ ಕಾನೂನು ಕ್ರಮ ಜರುಗಿಸಲು ಆದೇಶಿಸಿದ್ದು, ಆದರೆ ಸದರಿ ಅಧಿಕಾರಿಗಳು ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಉಪಾಧ್ಯಕ್ಷರು, 14 ಜನ ಸದಸ್ಯರುಗಳ ವಿರುದ್ಧ ಹಾಗೂ ಈ ಹಿಂದೆ ಇದ್ದ ಕಾರ್ಯದರ್ಶಿ ಜ್ಞಾನೇಶ್ವರಯ್ಯ ರವರ ವಿರುದ್ಧ ಯಾವುದೇ ಕ್ರಮ ಜರುಗಿಸಿರುವುದರಿಲ್ಲವೆಂದು ತಿಳಿಸಿರುತ್ತಾರೆ.

ಸದರಿಯವರು ತಮ್ಮ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರು ಮತ್ತು ಇತರೆ 14 ಜನ ಸದಸ್ಯರುಗಳು ಅವರಿಗೆ ಒತ್ತಾಯಪೂರ್ವಕವಾಗಿ ಖಾಲಿ ಚೆಕ್‌ಗಳ ಮೇಲೆ ಸಹಿ ಮಾಡಿ ಕೊಡುವಂತೆ ಅವರ ಮೇಲೆ ಒತ್ತಡ ಹೇರಿದ್ದು, ಅವರು ಈ ಕುರಿತಂತೆ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ, ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ಮತ್ತು ಮಾನ್ಯ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ರವರಿಗೆ ದೂರನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿಯವರು ಅಧ್ಯಕ್ಷೆಯಾದ ನಂತರ ಪ್ರತಿ ಸಾಮಾನ್ಯ ಸಭೆಗೆ ಹಾಜರಾಗಿದ್ದು, ಉಪಾಧ್ಯಕ್ಷರು ಮತ್ತು ಇತರೆ 14 ಜನ ಸದಸ್ಯರುಗಳು ದಿನಾಂಕ:04.09.2015, 09.06.2016, 27.06.2016, 29.07.2016 ಹಾಗೂ 13.01.2017, 14.03.2017, 23.05.2017 ರಂದು ನಡೆದ ಸಾಮಾನ್ಯ ಸಭೆಗೆ ಗೈರು ಹಾಜರಾಗಿರುತ್ತಾರೆ. ಸದರಿಯವರು ಪ್ರತಿ ಸಾಮಾನ್ಯ ಸಭೆಗೂ ಸಹ ಸಾಮಾನ್ಯ ಸಭಾ ಸೂಚನಾ ಪತ್ರವನ್ನು ಎಲ್ಲಾ ಸದಸ್ಯರಿಗೂ ಕೊಟ್ಟು ಅವರ ಸಹಿ ಪಡೆದು ಸಭೆಯನ್ನು ಕರೆದಿದ್ದು, ಉಪಾಧ್ಯಕ್ಷರು ಮತ್ತು 14 ಜನ ಸದಸ್ಯರುಗಳು ಅವರ ಮೇಲೆ ಮಾಡಿರುವ ಆರೋಪ ಅತ್ಯಂತ ಕೀಳು ಮಟ್ಟದಿದ್ದು, ತಾವುಗಳೆ ಸಾಮಾನ್ಯ ಸಭೆಗೆ ಹಾಜರಾಗದೆ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಬಿಡದೆ ಕೇವಲ ತಮ್ಮ ಸ್ವಾರ್ಥ ಅಧಿಕಾರದ ಆಸೆಗಾಗಿ ಅವರ ಮೇಲೆ ಸುಳ್ಳು ಆರೋಪಗಳನ್ನು ಮಾಡಿರುತ್ತಾರೆಂದು ಅವರುಗಳ ವಿರುದ್ಧ ಕ್ರಮ ವಹಿಸುವಂತೆ ತಿಳಿಸಿರುತ್ತಾರೆ.

ಸದರಿ ಗ್ರಾಮ ಪಂಚಾಯಿತಿಯ ಹಾಲಿ ಉಪಾಧ್ಯಕ್ಷರು ಮತ್ತು 14 ಜನ ಸದಸ್ಯರುಗಳು ಅವರಿಗೆ ಪಂಚಾಯಿತಿ ಸಾಮಾನ್ಯ ಸಭೆಗಳಲ್ಲಿ ಒತ್ತಾಯಪೂರ್ವಕವಾಗಿ ಸಹಿಗಳನ್ನು ಮಾಡಿಸಿದ್ದು ಮತ್ತು ಸುಳ್ಳು ತೀರ್ಮಾನಗಳನ್ನು ಸಭೆಯಲ್ಲಿ ಕೈಗೊಂಡಿದ್ದು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ತಡೆಹಿಡಿದಿದ್ದು,

ಇದರಿಂದ ಅವರಿಗೆ ತುಂಬಾ ತೊಂದರೆಯಾಗಿ ಅವರು ಎಲ್ಲಾ ಮೇಲಾಧಿಕಾರಿಗಳ ಗಮನಕ್ಕೆ ಪತ್ರ ಮುಖೇನ ತಿಳಿಸಿದ್ದು, ಅದರಂತೆ ಪೋಲೀಸ್ ಠಾಣೆಗೂ ಸಹ ದೂರು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ದೂರಿನಂತೆ ಹಡಗಲಿ ತಾಲ್ಲೂಕು, ಇಟ್ಟಿಗಿ ಪೋಲೀಸ್ ಠಾಣಾಧಿಕಾರಿಗಳು ಸದರಿ ಉಪಾಧ್ಯಕ್ಷರು ಮತ್ತು 14 ಜನ ಸದಸ್ಯರನ್ನು ಕರೆಯಿಸಿ ಅವರ ತಂಟೆಗೆ ಹೋಗದಂತೆ ಸೂಕ್ತ ತಿಳುವಳಿಕೆ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ ಅವರ ಮೇಲಿನ ಆರೋಪಗಳನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಸದರಿಯವರಿಗೆ ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ಹೊರಡಿಸಲಾಗಿದ್ದು, ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಗೆ ದಿನಾಂಕ:29.07.2017 ರಂದು ಸದರಿಯವರು ಹಾಜರಿದ್ದು, ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:29.07.2017 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸಿರುವ ವರದಿ ಹಾಗೂ ಸದರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ, ಸರ್ಕಾರವು ಈ ಪ್ರಕರಣದಲ್ಲಿನ ವಾಸ್ತವಂಶಗಳನ್ನು ಮನವರಿಕೆ ಮಾಡಿಕೊಂಡು, ಆಪಾದಿತ ಅಧ್ಯಕ್ಷರು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯನ್ನು ಕರೆಯಲು ಸೂಚಿಸಿದ್ದರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಭೆ ಕರೆದಿರುವುದಿಲ್ಲ. ಉಪಾಧ್ಯಕ್ಷರು ಸಭೆ ಕರೆದಿರುವುದಾಗಿ ತಿಳಿಸಿರುತ್ತಾರೆ. ಇದು ನಿಜವೆಂದು ಕಂಡು ಬಂದಿರುವುದರಿಂದ, ಅಧ್ಯಕ್ಷರ ಮೇಲೆ ಯಾವುದೇ ದುರ್ನಡತೆ ಇಲ್ಲದಿರುವುದರಿಂದ ಪ್ರಕರಣ ಮುಕ್ತಾಯಗೊಳಿಸಿದೆ ಹಾಗೂ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/750/ಗ್ರಾಪಂಅ/2017**
**ಬೆಂಗಳೂರು, ದಿನಾಂಕ:-11-10-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಮೈಲವ್ವ, ಅಧ್ಯಕ್ಷರು, ಸೊನ್ನ ಗ್ರಾಮ ಪಂಚಾಯಿತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯನ್ನು ಕರೆಯಲು ಸೂಚಿಸಿದ್ದರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಭೆ ಕರೆದಿರುವುದಿಲ್ಲವಾದ್ದರಿಂದ, ಅಧ್ಯಕ್ಷರ ಮೇಲೆ ಯಾವುದೇ ದುರ್ನಡತೆ ಇಲ್ಲದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 48(4) ಅಡಿಯಲ್ಲಿ ಆರೋಪ ಸಾಬೀತಾಗದ ಕಾರಣ ಪ್ರಕರಣ ಮುಕ್ತಾಯಗೊಳಿಸಿ ಆದೇಶಿಸಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

11/10

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:-**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
3. ಶ್ರೀಮತಿ ಮೈಲವ್ವ, ಅಧ್ಯಕ್ಷರು, ಸೊನ್ನ ಗ್ರಾಮ ಪಂಚಾಯಿತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೊನ್ನ ಗ್ರಾಮ ಪಂಚಾಯಿತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.